**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.34121/2018**

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಎಸ್.ಜೆ. ಪಾರ್ಕ್ ಆರಕ್ಷಕ ಠಾಣೆ, ಬೆಂಗಳೂರು.

ವಿರುದ್ಧ

ಆರೋಪಿಯ ಹೆಸರುಃ ಶ್ರವಣ್ ಕುಮಾರ್

**ದೋಷಾರೋಪಣೆ**

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಶ್ರೇಯಾಂಶ ದೊಡ್ಡಮನಿ ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣಾ ಪಟ್ಟಿಯ ಸಾಕ್ಷಿ-1 ರವರಾದ ಶ್ರೀ ಕರಣ್ ಕುಮಾರ್ ಆರ್ಯ ಅವರಿಗೆ ಸೇರಿದ ಎಸ್ ಪಿ. ರಸ್ತೆಯ ಪಿ.ಪಿ.ಲೇನ್ ಬಳಿ ಇರುವ ಜಿ.ವಿ.ಕಾಂಪ್ಲಕ್ಸ್ ನಂ.4 ರಲ್ಲಿರುವ ಕಂಪ್ಯೂಟರ್ ಮೆಘಾ ಮಾರ್ಟ್ ಶಾಪ್ ನಲ್ಲಿ ಆರೋಪಿಯಾದ ನೀವು ಬಿಷಪ್ ಕಾಟನ್ ಬಾಲಕಿಯರ ಶಾಲೆಗಾಗಿ ಸುಮಾರು ರೂ.18,70,726/- ಮೌಲ್ಯದ ಕಂಪ್ಯೂಟರ್ ಉಪಕರಣಗಳನ್ನು ಖರೀದಿಸಿ, ರೂ.3 ಲಕ್ಷಗಳನ್ನು ಆರ್ ಟಿ ಜಿ ಎಸ್ / ನೆಟ್ ಬ್ಯಾಂಕಿಂಗ್ ಮೂಲಕ ಸಾಕ್ಷಿ-1 ರವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿ ಉಳಿದ ರೂ.15,70,726/- ಗಳಿಗೆ ನೀವು ಅವರಿಗೆ ಮೂರು ಚೆಕ್ ಗಳನ್ನು ಕೊಟ್ಟಿದ್ದು , ಸದರಿ ಚೆಕ್ ಗಳನ್ನು ಅವರು ಬ್ಯಾಂಕಿಗೆ ಹಾಜರುಪಡಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದ ಕಾರಣ ಚೆಕ್ ಬೌನ್ಸ್ ಆಗಿದ್ದು , ನೀವು ಸಾಕ್ಷಿ-1 ರವರಿಗೆ ನಿಮ್ಮ ಬ್ಯಾಂಕ್ ಖಾತೆಯಲ್ಲಿ ಇಲ್ಲದಿದ್ದರೂ ಸಹ ಚೆಕ್ ಗಳನ್ನು ನೀಡಿ ಅವರಿಗೆ ನಂಬಿಕೆದ್ರೋಹವೆಸಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.406 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಎರಡನೇಯದಾಗಿ, ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಸೇರಿದ ಕಂಪ್ಯೂಟರ್ ಮೆಘಾ ಮಾರ್ಟ್ ಶಾಪ್ ನಲ್ಲಿ ಬಿಷಪ್ ಕಾಟನ್ ಬಾಲಕಿಯರ ಶಾಲೆಗಾಗಿ ಸುಮಾರು ರೂ.18,70,726/- ಮೌಲ್ಯದ ಕಂಪ್ಯೂಟರ್

ಉಪಕರಣಗಳನ್ನು ಖರೀದಿಸಿ, ರೂ.3 ಲಕ್ಷಗಳನ್ನು ಆರ್ ಟಿ ಜಿ ಎಸ್ / ನೆಟ್ ಬ್ಯಾಂಕಿಂಗ್ ಮೂಲಕ ಸಾಕ್ಷಿ-1 ರವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿ ಉಳಿದ ರೂ.15,70,726/- ಗಳಿಗೆ ನೀವು ಅವರಿಗೆ ಮೂರು ಚೆಕ್ ಗಳನ್ನು ಕೊಟ್ಟಿದ್ದು, ಸದರಿ ಚೆಕ್ ಗಳನ್ನು ಅವರು ಬ್ಯಾಂಕಿಗೆ ಹಾಜರುಪಡಿಸಿದಾಗ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದ ಕಾರಣ ಚೆಕ್ ಬೌನ್ಸ್ ಆಗಿದ್ದು , ಸಾಕ್ಷಿ-1 ರವರಿಗೆ ನೀವು ನಿಮ್ಮ ಬ್ಯಾಂಕ್ ಖಾತೆಯಲ್ಲಿ ಹಣವಿಲ್ಲದಿದ್ದರೂ ಸಹ ಚೆಕ್ ಗಳನ್ನು ನೀಡಿ ಅವರಿಗೆ ಹಣವನ್ನು ಪಾವತಿ ಮಾಡದೇ ಮೋಸ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರ:1 ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

ಉ:

ಪ್ರ:2 ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉ:

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕ:28.12.2023 3 ನೇ ಎ.ಸಿ.ಎಂ.ಎಂ., ನ್ಯಾಯಾಲಯ, ಬೆಂಗಳೂರು.